**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.63/2025**

ಸಾಕ್ಷಿದಾರರ ಹೆಸರು : ಶ್ರೀಕ್ರೆಗೌಡ

ತಂದೆಯ ಹೆಸರು : ರೇವಣಸಿದ್ದಪ್ಪ

ವಯಸ್ಸು : 35 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಕೆಚ್ಚೇನಹಳ್ಳಿ

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 6

ದಿ:11-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ಅಣ್ಣ. ಚಾಸಾ-4 ನನ್ನ ತಾಯಿ. ಚಾಸಾ-2, 3, 5, 7 ರಿಂದ 9 ರವರು ಗೊತ್ತು. ನಾವು ಮೂರು ಜನ ಅಣ್ಣ ತಮ್ಮಂದಿರು. ಮೃತ ಬಸವರಾಜ ನನ್ನ ತಮ್ಮ. 1 ನೇ ಆರೋಪಿ ನನ್ನ ತಮ್ಮ ಮೃತ ಬಸವರಾಜರವರ ಹೆಂಡತಿ. 2 ನೇ ಆರೋಪಿ ಗೊತ್ತು. ನನ್ನ ತಮ್ಮ ಆಟೋ ಚಲಾಯಿಸಿಕೊಂಡು ಇದ್ದ. ಮೃತ ಬಸವರಾಜರವರು 1 ನೇ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದರು. ಅವರು ಕೆಚ್ಚೇನಹಳ್ಳಿಯಲ್ಲಿ ವಾಸವಿದ್ದರು. ಅವರಿಗೆ ಇಬ್ಬರು ಮಕ್ಕಳು. ಅಲ್ಲಿ 04 ವರ್ಷಗಳ ಕಾಲ ವಾಸವಿದ್ದರು. ನಂತರ 1 ನೇ ಆರೋಪಿಯು ಮೃತ ಬಸವರಾಜರವರಿಗೆ ಮಾನಸಿಕವಾಗಿ ಅಂದರೆ ಬಸವರಾಜರವರಿಗೆ "ನೀನು ಸತ್ತರೆ ನಾನು ಚೆನ್ನಾಗಿ ಇರುತ್ತೇನೆ, ನಿನ್ನ ಜೊತೆ ಬಾಳಲು ಇಷ್ಟವಿಲ್ಲ"

ಅಂತ ಹಿಂಸೆ ಮಾಡುತ್ತಿದ್ದರು. 1 ನೇ ಆರೋಪಿಯು ಮೈಸೂರಿಗೆ ಹೋಗಿದ್ದರು. ನನ್ನ ತಮ್ಮ 1 ನೇ ಆರೋಪಿಯನ್ನು ಹುಡುಕಾಡಿದರೂ ಅವರು ಸಿಗದೇ ಇರುವುದಕ್ಕೆ ದೂರು ಕೊಟ್ಟಿದ್ದ.

2. ನಂತರ ಪೊಲೀಸರು 1 ನೇ ಆರೋಪಿಯನ್ನು ಮೈಸೂರಿನಿಂದ ಕರೆದುಕೊಂಡು ಬಂದರು. ನಾವೆಲ್ಲರೂ ಹಾಗೂ ಅವರ ತವರ ಮನೆಯವರು ಸೇರಿ 1 ನೇ ಆರೋಪಿಗೆ ಬುದ್ದಿವಾದ ಹೇಳಿದೆವು. ಆದರೂ ಸಹ 1 ನೇ ಆರೋಪಿಯು ಯಾರ ಮಾತು ಕೇಳಲಿಲ್ಲ. ತವರು ಮನೆಯಲ್ಲಿ 02-03 ದಿನ ಇದ್ದು, ಆಗ 1 ನೇ ಆರೋಪಿಯು ಜಗಳೂರಿನಲ್ಲಿ ಬೇರೆ ಮನೆ ಮಾಡಿದರೆ ಬರುತ್ತೇನೆ ಅಂತ ಹೇಳಿದರು. ನನ್ನ ತಮ್ಮ ಮೃತ ಬಸವರಾಜರವರು ಜಗಳೂರಿನಲ್ಲಿ ಮನೆ ಮಾಡಿದರು. ಮತ್ತೆ ಅವರಿಬ್ಬರು ಬಾಡಿಗೆ ಮನೆಯಲ್ಲಿದ್ದರು. ಮೃತ ಬಸವರಾಜರವರು ತನ್ನ ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟು ಆಟೋ ಬಾಡಿಗೆ ಸಿಕ್ಕಿದ್ದರಿಂದ ಹೊರಗಡೆ ಹೋಗಿದ್ದ. ತದನಂತರ 1 ನೇ ಆರೋಪಿಯು ಆ ಮನೆಯಲ್ಲಿ ತನ್ನ ಮಕ್ಕಳನ್ನು ಬಿಟ್ಟು ಬೀಗ ಹಾಕಿ ಹೋಗಿದ್ದರು. ಮಕ್ಕಳು ಕಿರುಚಿರುವುದನ್ನು ಪಕ್ಕದ ಮನೆಯವರು ನೋಡಿ ನನ್ನ ತಮ್ಮನಿಗೆ ವಿಷಯವನ್ನು ಹೇಳಿದರು. ನಂತರ ನನ್ನ ತಮ್ಮ ಮಕ್ಕಳನ್ನೆಲ್ಲಾ ಕರೆದುಕೊಂಡು ಕೆಚ್ಚೇನಹಳ್ಳಿಗೆ ಬಂದರು. ಮನೆಗೆ 1 ನೇ ಆರೋಪಿಯನ್ನು ಕರೆದರೂ ಸಹ ಬರಲಿಲ್ಲ.

3. 1 ಮತ್ತು 2 ನೇ ಆರೋಪಿತರು ಫೋನ್ ಮೂಲಕ ಮೃತ ಬಸವರಾಜರಿಗೆ "ನೀನು ಸಾಯಿ ನೀನು ಸತ್ತರೆ ನಾವು ಚೆನ್ನಾಗಿ ಇರುತ್ತೇವೆ" ಅಂತ ಹೇಳುತ್ತಿದ್ದರು. ಮೃತ ಬಸವರಾಜರವರು ಈ ಎಲ್ಲಾ ವಿಷಯವನ್ನು ಹೇಳುತ್ತಿದ್ದರು ಮತ್ತು ಬೇಸರ ಆಗಿದೆ ಅಂತ ಹೇಳುತ್ತಿದ್ದರು. ಇದರಿಂದ ನನ್ನ ತಮ್ಮ ನೇಣು ಹಾಕಿಕೊಂಡು ತೀರಿಕೊಂಡ. ನನ್ನ ತಮ್ಮನ ಸಾವಿಗೆ 1 ಮತ್ತು 2 ನೇ ಆರೋಪಿತರು ಕಾರಣ ಆಗಿರುತ್ತಾರೆ. 1 ಮತ್ತು 2 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೆನೆ. ಈ ದಿನ ಹಾಜರಾಗಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. (2 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು, ಆತನನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಅಂತ ಆರೋಪಿತರ ಪರ ವಕೀಲರು ಹೇಳಿರುತ್ತಾರೆ.)

**ಪಾಟೀ ಸವಾಲುಃ ಶ್ರೀ ಪಿ.ಕೆ.ಬಿ., ವಕೀಲರಿಂದ 2 ನೇ ಆರೋಪಿ ಪರವಾಗಿ:**

4. ಮೃತ ಬಸವರಾಜ ಮತ್ತು 1 ನೇ ಆರೋಪಿಯ ಮದುವೆಯಾಗಿ 05 ವರ್ಷ ಆಗಿತ್ತು. ಅವರಿಬ್ಬರು ಪ್ರೀತಿಸಿ ಮದುವೆಯಾಗಿದ್ದರಿಂದ ಅವರ ಮತ್ತು ನಮ್ಮ ನಡುವೆ ಮನಸ್ತಾಪ ಇತ್ತು ಅಂದರೆ ಸುಳ್ಳು. ಮದುವೆಯಾದ ನಂತರ ನಾವು ಅವರು ಬೇರೆ ಬೇರೆ ವಾಸವಾಗಿದ್ದೆವು. ಮನೆಯ ಸಂಪೂರ್ಣ ಜವಬ್ದಾರಿಯನ್ನು ಮೃತ ಬಸವರಾಜರವರು ನೋಡಿಕೊಳ್ಳುತ್ತಿದ್ದರು. ನನ್ನ ತಮ್ಮ ಬರೆದ ಡೆತ್ ನೋಟ್ ಬಗ್ಗೆ ನನಗೆ ಮಾಹಿತಿ ಇದೆ. ಪೊಲೀಸರಿಗೆ ಡೆತ್ ನೋಟ್ ಮತ್ತು 12 ಪೇಜ ನ ಒಂದು ನೋಟಬುಕ್ ಕೊಟ್ಟಿದ್ದರು. ಡೆತ್ ನೋಟ್ ನಲ್ಲಿ ಏನೇನು ಬರೆದಿದೆ ಅಂತ ನನಗೆ ಗೊತ್ತು. ನನ್ನ ತಮ್ಮ ಒಂದೇ ಡೆತ್ ನೋಟ್ ಬರೆದಿದ್ದರು. ಈಗ ನನಗೆ ತೋರಿಸಿದ ನಿಪಿ-5 ರಲ್ಲಿ "ನನ್ನ ಸಾವಿಗೆ 1 ಮತ್ತು 2 ನೇ ಆರೋಪಿ ಕಾರಣಕರ್ತರು" ಅಂತ ಬರೆದಿದ್ದಾರೆ.

5. ನನ್ನ ತಮ್ಮ ಪ್ರಥಮ ವರ್ಷದ ಪಿಯುಸಿ ಕಲಿತಿದ್ದರು. ಅವರ ಮೊಬೈಲ್ ನಂಬರ ನನಗೆ ನೆನಪಿಲ್ಲ. ಅವರ ಮೊಬೈಲ್ ನಂಬರನ ಕೊನೆಯ ನಂಬರ ****98 ಇರಬಹುದು. ನನ್ನ ತಮ್ಮ LIC ಮಾಡಿಸಿದ್ದರು. ಅದರಲ್ಲಿ ಎಷ್ಟು ಹಣ ಇತ್ತು ಅಂತ ನನಗೆ ಗೊತ್ತಿಲ್ಲ. ನನ್ನ ತಮ್ಮ Mutual fund ಮಾಡಿಸಿದ್ದರು. ಅದರಲ್ಲಿ ಎಷ್ಟು ಹಣ ಇತ್ತು ಅಂತ ನನಗೆ ಗೊತ್ತಿಲ್ಲ. ನನ್ನ ತಮ್ಮನ ಮೊಬೈಲ್ ಲಾಕ್ ನಂಬರ ನನಗೆ ಗೊತ್ತಿಲ್ಲ. ನನ್ನ ತಮ್ಮನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಅಂತ ಮೊಬೈಲ್ ನಲ್ಲಿ ಚೆಕ್ ಮಾಡಿಲ್ಲ. ಅದರಲ್ಲಿ ಇದ್ದಂತಹ ₹50,000/- ರೂಪಾಯಿಯನ್ನು ನಾನೇ ತೆಗೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನನ್ನ ತಮ್ಮನ ಗೋದರೇಜ್ ಬೀರುವಿನಲ್ಲಿ ಬಟ್ಟೆಗಳನ್ನು ಹೊರತುಪಡಿಸಿ ಬೇರೆ ಏನೂ ಇರಲಿಲ್ಲ ನನಗೆ ಮತ್ತು ನನ್ನ ಸಹೋದರಿಗೆ ಹಣಕಾಸಿನ ಸಹಾಯ ಮಾಡಿದ್ದರು ಅಂದರೆ ನಿಜ. ಅವರು ಎಷ್ಟು ಹಣದ ಸಹಾಯ ಮಾಡಿದ್ದರು ಅಂತ ನನಗೆ ಈಗ ಹೇಳಲು ಬರುವುದಿಲ್ಲ.

6. ಮೈಸೂರಿಗೆ 1 ನೇ ಆರೋಪಿ ಹೋಗಿದ್ದು ನಾನು ನೋಡಿದ್ದೇನೆ. ಈ ವಿಷಯವನ್ನು ನನಗೆ ಪೊಲೀಸರು ಹೇಳಿದರು. ಮೈಸೂರಿನಲ್ಲಿ ಎಲ್ಲಿ ಹೋಗಿದ್ದರು ಅಂತ ನನಗೆ ಗೊತ್ತಿಲ್ಲ. ಮೃತ ಬಸವರಾಜರವರು ನನಗೆ ಪ್ರೀತಿಯಿಂದ ಹಣದ ಸಹಾಯ ಮಾಡಿದ್ದರು. ಡೆತ್ ನೋಟ್ ನಲ್ಲಿ ದೆವ್ವದ ಬಗ್ಗೆ ಬರೆದಿದ್ದಾರೆ ಅಂದರೆ ಸರಿ. ಮೃತ ಬಸವರಾಜರವರು ಮಾನಸಿಕವಾಗಿ ಕುಗ್ಗಿದ್ದರು ಆದ್ದರಿಂದ ಅವರು ದೆವ್ವದ ಬಗ್ಗೆ ಬರೆದಿದ್ದರು ಅಂದರೆ 1 ಮತ್ತು 2 ನೇ ಆರೋಪಿತರು ಆ ರೀತಿ ಹೇಳಿದ್ದರಿಂದ ಅವರು ಮಾನಸಿಕವಾಗಿ ನೊಂದಿದ್ದರು. ಮೃತ ಬಸವರಾಜರವರು ನೇಣು ಹಾಕಿಕೊಂಡು ತೀರಿಕೊಂಡಿದ್ದಾರೆ ಅಂತ ನನಗೆ ಗೊತ್ತಾಯಿತು. ಆ ಸಮಯದಲ್ಲಿ ನಾನು ಕೆಲಸಕ್ಕೆ ಹೋಗಿದ್ದೆ. ನನ್ನ ಕೆಲಸದ ಜಾಗ ಮತ್ತು ಮೃತ ಬಸವರಾಜರವರು ತೀರಿಕೊಂಡ ಜಾಗದ ಅಂತರ 20 ಕಿ.ಮೀ. ಇರಬಹುದು. ನಾನು ಆಗ ಬೈಕ್ ನಲ್ಲಿ ಬಂದೆ. ತೀರಿಕೊಂಡ ವಿಷಯ ನನಗೆ ಬೆಳಿಗ್ಗೆ 10.30 ಗಂಟೆಗೆ ಬಂದೆ. ನಾನು ಮನೆಗೆ ಬಂದಾಗ 11.30-12.00 ಗಂಟೆ ಆಗಿತ್ತು. ಅಲ್ಲಿ ಊರಿನ ಗ್ರಾಮಸ್ಥರೆಲ್ಲಾ ಇದ್ದರು. ಆಗ ಪೊಲೀಸರು ಇರಲಿಲ್ಲ ದೂರು ಕೊಟ್ಟ ನಂತರ ಪೊಲೀಸರು ಬಂದರು.

7. ನನ್ನ ತಮ್ಮ ಮೃತ ಬಸವರಾಜರವರು ತನ್ನ ಮಕ್ಕಳನ್ನು ನಾವೇ ನೋಡಿಕೊಳ್ಳಬೇಕು ಅಂತ ಡೆತ್ ನೋಟ್ ನಲ್ಲಿ ಇದೆ. ಆರೋಪಿತರ ಮಾನಸಿಕ ಒತ್ತಡದಿಂದ ಆ ಡೆತ್ ನೋಟ್ ನಲ್ಲಿ ಮಕ್ಕಳಿಗೆ ಮೋಸ ಮಾಡಬೇಡಿ ಕೈ ಮುಗಿದು ಕಾಲು ಬಿದ್ದು ಕೇಳಿಕೊಳ್ಳುತ್ತೇನೆ ಅಂತ ಬರೆದಿದ್ದಾರೆ. ಈ ಶಬ್ದಗಳಿಂದ ನನ್ನ ಮೇಲೆ ಮೃತ ಬಸವರಾಜರವರಿಗೆ ನಂಬಿಕೆ ಇರಲಿಲ್ಲ ಅಂದರೆ ನಂಬಿಕೆ ಇದ್ದಿದ್ದರಿಂದಲೇ ಮಕ್ಕಳನ್ನು ನೋಡಿಕೊಳ್ಳಬೇಕು ಅಂತ ಬರೆದಿದ್ದಾರೆ.

8. ಈಗ ನನಗೆ ತೋರಿಸಿದ ನಿಪಿ-7(ಇ) ರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಅದನ್ನು ಈಗ ನಾನು ಓದಿದ್ದೇನೆ. ನಾನು ಮತ್ತು ನನ್ನ ತಮ್ಮ ಬೇರೆ ಬೇರೆಯಾಗಿರುವುದರಿಂದ ಅವರ ಜೀವನ ಅವರು ನೋಡಿಕೊಳ್ಳುತ್ತಿದ್ದರು, ನಮ್ಮ ಜೀವನ ನಾವು ನೋಡಿಕೊಳ್ಳುತ್ತಿದ್ದೆವು. ಮೃತ

ಬಸವರಾಜರವರು ಆರ್ಥಿಕವಾಗಿ ಚೆನ್ನಾಗಿ ಇದ್ದಿದ್ದರಿಂದ ನಾನು ಮತ್ತು ನನ್ನ ಹೆಂಡತಿ ಅವರ ಹತ್ತಿರ ಸಹಾಯ ಕೇಳುತ್ತಿದ್ದೇವು ಅಂದರೆ ಸರಿಯಲ್ಲ. ಮೃತ ಬಸವರಾಜರವರು ತೀರಿಕೊಂಡಾಗ ಮಗಳು ಭಾತಿ ಗ್ರಾಮದಲ್ಲಿದ್ದವರನ್ನು ಕರೆದುಕೊಂಡು ಬಂದೆವು. ಭಾತಿಯಲ್ಲಿ ಮಗಳನ್ನು ಅವರ ಅಜ್ಜಿ ನೋಡಿಕೊಳ್ಳುತ್ತಿದ್ದರು. ನಾನು ಮತ್ತು ನನ್ನ ಅಣ್ಣ ಸೇರಿ ಮೃತ ಬಸವರಾಜರವರಿಗೆ ತೊಂದರೆ ಕೊಡುತ್ತಿದ್ದೆವು ಅಂದರೆ ಸರಿಯಲ್ಲ. ನನ್ನ ತಮ್ಮನ Mutual fund, LIC, Bank ನ ಖಾತೆ ನಮ್ಮ ಮನೆಯಲ್ಲಿ ಇವೆ ಅವುಗಳನ್ನು ಏನು ಮಾಡಬೇಕು ಅಂತ ನಮಗೆ ಗೊತ್ತಿಲ್ಲ ಹಾಗೆ ಇವೆ. ಊರಿನ ಗ್ರಾಮಸ್ಥರು ಸೇರಿದಾಗ ಅವುಗಳಲ್ಲಿರುವ ಹಣವನ್ನು ನಮಗೆ ಕೊಟ್ಟರೆ ದೂರು ಕೊಡುವುದಿಲ್ಲ ಅಂತ 1 ನೇ ಆರೋಪಿಗೆ ಹೇಳುತ್ತಿದ್ದೆ ಅಂದರೆ ಸರಿಯಲ್ಲ. ಆಗ 1 ನೇ ಆರೋಪಿ ಅದು ನನ್ನ ಗಂಡನಿಗೆ ಸಂಬಂಧಪಟ್ಟಿದ್ದು ಕೊಡುವುದಿಲ್ಲ ಅಂತ ಹೇಳಿದರು ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರವಾಗಿ**:

1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.